ಸುರೇಶ ನಾಗಲಮಡಿಕೆ

# ಬದುಕಿನ ಹುಡುಕಾಟ ಮುಖ್ಯ



1 ಇಲ್ಲಿ 'ಸರಿಯಾದ' ವಿಮರ್ಶೆ ಎಂದರೇನು? ಎಂಬ ಪ್ರಶ್ನೆಯನ್ನು ಮೊದಲು ವಿವರಿಸಿಕೊಳ್ಳಬೇಕು. ಒಂದು ಕಾಲಘಟ್ಟದಲ್ಲಿ ಕೆಲವು ಕೃತಿಗಳಿಗೆ ಅಥವಾ ಲೇಖಕರಿಗೆ ಅದೇ ಕಾಲಘಟ್ಟದಲ್ಲಿ ಸಿಗದ ಚರ್ಚೆ, ಸಂವಾದಗಳು ಬೇರೊಂದು ಸಂದರ್ಭಗಳಲ್ಲಿ ಸಿಗುತ್ತಿರುತ್ತವೆ. ನಿದರ್ಶನಕ್ಕೆ ಶಂಬಾ ಜೋಷಿ, ಕಪಟರಾಳ, ಮುಳಿಯ ತಿಮ್ಮಪ್ಪಯ್ಯ ಮುಂತಾದ ವಿದ್ವಾಂಸರಿಗೆ ಅವರು ಬರೆದ ಸಂದರ್ಭದಲ್ಲಿ ಅವರ ಬರಹಗಳ ಬಗ್ಗೆ ಸರಿಯಾದ ಚರ್ಚೆಗಳು ನಡೆದಂತೆ ಕಾಣುವುದಿಲ್ಲ. ಆದರೆ ಭಾಷಾವಿಜ್ಞಾನ, ಮಾನವಶಾಸ್ತ್ರ, ಸಾಂಸ್ಕೃತಿಕ ಅಧ್ಯಯನಗಳ ವ್ಯಾಪ್ತಿ ವಿಸ್ತಾರವಾದಂತೆಲ್ಲ ಅವರ ಕೃತಿಗಳಿಗೆ ಹೊಸತಲೆಮಾರು ಪುನರ್ ಭೇಟಿ ಕೊಡಲು ಯತ್ನಿಸಿದೆ. ಈ ಕ್ರಮ ಹಿರಿಯ ವಿದ್ವಾಂಸರ ಆಳ ಅಧ್ಯಯನಕ್ಕೆ ಸಂದ ನ್ಯಾಯವೂ ಹೌದು. ಇದನ್ನು ಹೇಳಲು ಕಾರಣ ಹೊಸತಲೆಮಾರಿನ ಕೃತಿಗಳಿಗೆ ಆ ಕ್ಷಣದಲ್ಲೆ ಅಥವಾ ಕ್ಷಿಪ್ರ ಕ್ರಮದಲ್ಲಿ ವಿಮರ್ಶಾ ನ್ಯಾಯ ಸಿಗದಿರಬಹುದು; ಆದರೆ ಗಟ್ಟಿಯಾದ ಕೃತಿಗಳಿಗೆ ಪ್ರತಿಕ್ರಿಯಿಸಲು ವಿಮರ್ಶಕರೇ ಬೇಕಾಗಿಲ್ಲ. ಓದುಗರ ಸ್ಪಂದನ ಸಾಕು. ವಿಮರ್ಶೆ ಯಾಕೆ ಹುಟ್ಟುತ್ತಿಲ್ಲ? ಎಂಬುದಕ್ಕೆ ಹಲವು ಕಾರಣಗಳು ಎದುರುಬಂದು ನಿಂತುಕೊಳ್ಳುತ್ತವೆ. ಇಂದಿನ ವಿಮರ್ಶೆಯ ಮಾನದಂಡಗಳು ಅಥವಾ ವಿಧಾನಗಳು ಬದಲಾಗಿವೆ. ನವೋದಯ, ನವ್ಯ ಕಾಲದ ಕೆಲವು ಆರೋಗ್ಯಕರ ಸಂವಾದಗಳು, ಜಿ.ಎಸ್. ಶಿವರುದ್ರಪ್ಪನವರ ಕಾಲದಲ್ಲಿ ಹುಟ್ಟಿಕೊಂಡ ವಿಮರ್ಶಾಪರಂಪರೆ ಈಗ ಇಲ್ಲದಿರುವುದಕ್ಕೆ ಕೇವಲ ಪತ್ರಿಕೆಗಳು ಕಾರಣವಲ್ಲ. ಅವು ಸಾಹಿತ್ಯದ ಒಂದು ಜವಾಬ್ದಾರಿಯನ್ನು ಮಾತ್ರ ಹೊತ್ತಿರುತ್ತವೆ. ಆದರೆ ವಿಶ್ವವಿದ್ಯಾಲಯಗಳು, ಅಲ್ಲಿರುವ ಮಾರ್ಗದರ್ಶಕರು ಹೊಸಬರನ್ನು ಸರಿಯಾದ ರೀತಿಗೆ ತೆಗೆದುಕೊಂಡು ಹೋಗುವ ಅನಿವಾರ್ಯತೆ ಇದೆ. ದುರಂತವೆಂದರೆ ನಮ್ಮ ಕೆಲವು ವಿಶ್ವವಿದ್ಯಾಲಯಗಳಲ್ಲಿ ವಿಮರ್ಶೆಯಲ್ಲಿ ಮತ್ತು ಇತರ ಜ್ಞಾನಶಿಸ್ತುಗಳಲ್ಲಿ ಉತ್ಸಾಹವಿರುವ ವಿದ್ಯಾರ್ಥಿಗಳಿದ್ದರೂ, ಅವರನ್ನು ದಿಕ್ಕು ತಪ್ಪಿಸುವ ಯತ್ನಗಳು ನಡೆಯುತ್ತಿವೆ. ಇಷ್ಟಾದರೂ ಕೆಲವು ಸಂಶೋಧನಾ ವಿದ್ಯಾರ್ಥಿಗಳು ಮುಕ್ತತೆಯನ್ನು ಕಾಪಾಡಿಕೊಂಡು ಗಂಭೀರ ಓದಿನಲ್ಲಿ ತೊಡಿಸಿಕೊಂಡಿದ್ದಾರೆ. ಆದರೆ ಅವರಿಗೆ ಬೇಕಾಗಿರುವುದು ಪೂರ್ವಗ್ರಹವಿಲ್ಲದ, ನಿಸ್ವಾರ್ಥ, ಸಮರ್ಥ ಮಾರ್ಗದರ್ಶನ.